3. ಪ್ರಶ್ನೋತ್ತರ

ಅ. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಶ್ರೀ ಸೋಮಶೇಖರ್ ಎಸ್.ಟಿ:– ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರ ನೀಡಿರುವುದು ನನಗೆ ತಲುಪಿದೆ, ಇದರಲ್ಲಿ ಅದಾಲತ್ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದಾರೆ, ದಯವಿಟ್ಟು ಒಳ್ಳೆಯ ಕೆಲಸವನ್ನು ಮಾಡಬೇಕು, ರೈತರಿಗೆ ತೊಂದರೆಯಾಗುತ್ತಿದೆ ಆದ್ದರಿಂದ ಪೋಡು ಮಾಡಬೇಕು ಎಂದು ತಮ್ಮ ಮೂಲಕ ಮಾನ್ಯ ಕಂದಾಯ ಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ, ಅನ್ಸರ್ ಕರೆಕ್ಟ್ ಆಗಿ ಬಂದಿದೆ.

ಅಧ್ಯಕ್ಷರು:– ಅದು ನನಗೆ ಗೊತ್ತಿದೆ, ಪಕ್ಕಾ ಪೋಡಿಯಾಗುವುದಿಲ್ಲ, ನೀವು ಏನು ಮಾಡಿದರೂ ಆಗುವುದಿಲ್ಲ, ನನಗೆ ಗೊತ್ತಿದೆ ಬಿಡಿ.

ಶ್ರೀ ವಿ. ಸುನಿಲ್ ಕುಮಾರ್:– ಆಗುವುದಿಲ್ಲವೆಂದರೆ, ಉತ್ತರ ಹೇಗೆ ಸಮಾಧಾನವಾಯಿತು ಸರ್?

ಅಧ್ಯಕ್ಷರು:– ವಿಲ್ ಬೇಕಲ್ಲಾ?

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಆಗಲೇ ನಾನು ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಹೇಳಿದ್ದಕ್ಕೆ, ಬೇಡವೆಂದು ಹೇಳಿದಿರಿ. ಆದರೆ ಮಾನ್ಯ ಮುಖ್ಯಮಂತ್ರಿಗಳು ನೀಡಿರುವ ಈ ಸ್ಟೇಟ್‌ಮೆಂಟ್ ನೋಡಿ, 'ವಿರೋಧ ಪಕ್ಷಗಳು ಒಬ್ಬ ಅಧಿಕಾರಿಯ ಸಾವನ್ನು ಮುಂದಿಟ್ಟುಕೊಂಡು ರಾಜಕೀಯ ಲಾಭ ಗಳಿಸಲು ಹೋರಟಿರುವುದು ದುರದೃಷ್ಟಕರ ಬೆಳವಣಿಗೆ. ಈ ದುರುದ್ದೇಶದಿಂದ ವಿರೋಧ ಪಕ್ಷಗಳ ನಾಯಕರು ಸರ್ಕಾರದ ಮೇಲೆ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ. ಮೃತ ಅಧಿಕಾರಿಯ ಕುಟುಂಬದ ಸದಸ್ಯರನ್ನು ಭಾವನಾತ್ಮಕವಾಗಿ ಬಳಸುತ್ತಿದ್ದಾರೆ. ದುಖಿ:ತಪ್ತ ತಂದೆ–ತಾಯಿಗಳನ್ನು ಮಗನ ಅಂತ್ಯಕ್ರಿಯೆಯ ಮರುದಿನವೇ ಬೆಂಗಳೂರಿಗೆ ಕರೆತಂದು ವಿಧಾನ ಸೌಧದ ಮುಂದೆ ಧರಣಿ ಕೂರುವಂತೆ ಮಾಡಿರುವುದು ರಾಜಕೀಯ ಅಸೂಕ್ಷ್ಮತೆಯನ್ನು ತೋರಿಸುತ್ತದೆ ಎಂದು ಹೇಳಿದ್ದಾರೆ

ಶ್ರೀ ಆರ್.ವಿ. ದೇಶಪಾಂಡೆ:– ಸತ್ಯ ಹೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:– 'ವಿರೋಧಪಕ್ಷಗಳ ಊಹಾಪೋಹ ಆಧಾರಿತ ಸುಳ್ಳು ಆರೋಪಗಳಿಂದಾಗಿ ರಾಜ್ಯದ ಶಾಂತಿ ಮತ್ತು ಸುವ್ಯವಸ್ಥೆಗೆ ಭಂಗ ಉಂಟಾಗುತ್ತಿದೆ. ಇದನ್ನು ನಿಯಂತ್ರಿಸುವುದು ಸರ್ಕಾರದ ಕರ್ತವ್ಯವಾಗಿದೆ ಎಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೆ, ಇದು ವಿರೋಧ ಪಕ್ಷಗಳ ಮೇಲೆ ಬಹಳ ಗಂಭೀರವಾದ ಆಪಾದನೆಯಾಗಿದೆ. ಈ statementನಲ್ಲಿ ಸತ್ಯ ಇಲ್ಲ. simple ಆಗಿ CBIಗೆ ಕೊಟ್ಟಿದ್ದೇವೆ ಎಂದು ಹೇಳಿದ್ದರೆ ಸಾಕಿತ್ತು ಈ ರೀತಿ ಆಪಾದನೆ ಹೊತ್ತು ನಾವು ಇಲ್ಲಿ ಇರಲಿಕ್ಕೆ ಸಾಧ್ಯವಿಲ್ಲ. ಇದನ್ನು ವಾಪಸ್ ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:– ಪ್ರಶ್ನೋತ್ತರ ವೇಳೆ ಪ್ರಾರಂಭವಾಗಿದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಸಿಂಪಲ್ ಆಗಿ CBI ಕೊಡುತ್ತೇವೆಂದು ಹೇಳಬೇಕಿತ್ತು.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:– ಸತ್ಯ ಹೇಳಬೇಕಾಗುತ್ತದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಏನು ಸತ್ಯ ಹೇಳುತ್ತೀರಿ? ಆನರ ಧ್ವನಿಯಾಗಿ ಕೆಲಸ ಮಾಡಬೇಕು. ಜನಸಾಮಾನ್ಯರು ಏನು ಹೋರಾಟ ಮಾಡಿದ್ದಾರೆ, ಅವರೇನು ರಾಜಕೀಯ ಮಾಡಿದ್ದಾರೆಯೇ? ದಯವಿಟ್ಟು ಇದನ್ನು ನೋಡಿ. ಮಾನ್ಯ ಅಧ್ಯಕ್ಷರೆ, ಇದು ಸರಿಯಲ್ಲ. ಈ statement ಅನ್ನು ಅವರು ವಾಪಸ್ ತೆಗೆದುಕೊಳ್ಳಬೇಕು. ಇದನ್ನು ದಯವಿಟ್ಟು ಕಡತದಿಂದ ತೆಗೆಸಿ ಹಾಕಿ. ಈ ರೀತಿ ಆಪಾದನೆ ಮಾಡುವುದು ಒಳ್ಳೆಯದಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಇದೇ ರೀತಿ ಕುತಂತ್ರ ಮಾಡಿ ವ್ಯವಸ್ಥೆ ಹಾಳು ಮಾಡುತ್ತಿದ್ದಾರೆ. ಇದರಲ್ಲಿ 'ವಿರೋಧ ಪಕ್ಷಗಳು ಒಬ್ಬ ಅಧಿಕಾರಿಯ ಸಾವನ್ನು ಮುಂದಿಟ್ಟುಕೊಂಡು ರಾಜಕೀಯ ಲಾಭ ಗಳಿಸಲು ಹೊರಟಿರುವುದು ದುರಾದೃಷ್ಟಕರ ಬೆಳವಣಿಗೆ.' ಈ

ದುರುದ್ದೇಶದಿಂದ ವಿರೋಧ ಪಕ್ಷಗಳ ನಾಯಕರು ಸರ್ಕಾರದ ಮೇಲೆ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ. ಮೃತ ಅಧಿಕಾರಿಯ ಕುಟುಂಬದ ಸದಸ್ಯರನ್ನು ಭಾವನಾತ್ಮಕವಾಗಿ ಬಳಸುತ್ತಿದ್ದಾರೆ. ದುಃಖ:ತಪ್ತ ತಂದೆತಾಯಿಗಳನ್ನು ಮಗನ ಅಂತ್ಯಕ್ರಿಯೆಯ ಮರುದಿನವೇ ಬೆಂಗಳೂರಿಗೆ ಕರೆತಂದು ವಿಧಾನಸೌಧದ ಮುಂದೆ ಧರಣಿ ಕೂರುವಂತೆ ಮಾಡಿರುವುದು ರಾಜಕೀಯ ಅಸೂಕ್ಷ್ಮತೆಯನ್ನು ತೋರಿಸುತ್ತದೆ. ವಿರೋಧ ಪಕ್ಷಗಳ ಊಹಾಪೋಹ ಆಧಾರಿತ ಸುಳ್ಳು ಆರೋಪಗಳಿಂದಾಗಿ ರಾಜ್ಯದ ಶಾಂತಿ ಮತ್ತು ಸುವ್ಯವಸ್ಥೆಗೆ ಭಂಗ ಉಂಟಾಗಿರುತ್ತದೆ" ಎಂದು ಹೇಳಿದ್ದಾರೆ. ಅಂದರೆ ನಾವು Law and order ಹಾಳು ಮಾಡುತ್ತಿದ್ದೇವೆಯೇ? ನಾವು ರಾಜಕಾರಣ ಮಾಡುತ್ತಿದ್ದೇವೆಯೇ? ಜನರ ಭಾವನೆ ಮತ್ತು ಹೋರಾಟದ, ಬಗ್ಗೆ ನಾವು ಸದನದಲ್ಲಿ ಹೇಳಿದರೆ ನಾವು ಸುಳ್ಳು ಹೇಳುತ್ತಿದ್ದೇವೆಯೇ? ಇದು ಗಂಭೀರವಾದ statement. ಈ statement ಅನ್ನು ವಾಪಸ್ ತೆಗೆದುಕೊಳ್ಳಬೇಕು. ಈಗಾಗಲೇ ಏಳು ದಿವಸ ಹಾಳು ಮಾಡಿದ್ದೀರಿ. ನಾನು ಮಾನ್ಯ ಅಧ್ಯಕ್ಷರಲ್ಲಿ ವಿನಂತಿ ಮಾಡುತ್ತೇನೆ. ಇದನ್ನು ರೆಕಾರ್ಡ್‌ನಿಂದ ತೆಗೆದುಹಾಕಬೇಕು.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:– ಪ್ರಶ್ನೋತ್ತರ ವೇಳೆ ಪ್ರಾರಂಭವಾಗಿದೆ. Why they are coming back? ಯಾವ procedure ಪ್ರಕಾರ? I want to know from the Hon'ble Speaker. Under Which rule he is speaking?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ನೀವು ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದ್ದೀರಿ. ಈ ರೀತಿ ಆಪಾದನೆ ಹೊತ್ತುಕೊಂಡು ನಾವು ಕೆಲಸ ಮಾಡಬೇಕಾ? ಸದನದಲ್ಲಿ ಈ ರೀತಿ ಆಪಾದನೆ ಹೊತ್ತುಕೊಂಡು ನಾವು ಹೇಗೆ ಕೆಲಸ ಮಾಡುವುದು?

(ಗೊಂದಲ)

ಅಧ್ಯಕ್ಷರು:– ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಭಾಷಣ ಮಾಡಿ ಉತ್ತರ ಹೇಳಿದ್ದಾರೆ, ಅವರ ಲಿಖಿತ ಹೇಳಿಕೆ ಸಹಾ ಕೊಟ್ಟಿದ್ದಾರೆ. ಅದು ಅವರಿಗೆ ಬಿಟ್ಟಂತಹ ಸ್ವಾತಂತ್ರ್ಯ ಅದನ್ನು ನಾವು ಯಾರೂ ಕಸಿದುಕೊಳ್ಳುವುದಕ್ಕಾಗುವುದಿಲ್ಲ. ನೀವು ಅದರ ಬಗ್ಗೆ ಯಾವ ರೀತಿ ಬೇಕಾದರೂ ಪ್ರತಿಕ್ರಿಯಿಸಿ, ನನ್ನದೇನೂ ಅಭ್ಯಂತರವಿಲ್ಲ. ಆದರೆ ಅದರ ಬಗ್ಗೆ ತೀರ್ಮಾನ ಮಾಡುವುದಕ್ಕಾಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಈ ರೀತಿ ಆಪಾದನೆ ಮಾಡುವುದು ಸರಿಯೇ?

(ಗೊಂದಲ)

ಅಧ್ಯಕ್ಷರು:– ಅವರ ಭಾಷಣದಲ್ಲಿ ಹೇಳಿದ್ದಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ತಾವು statement ತೆಗೆದು ನೋಡಿ. ಈ ರೀತಿ ಮಾಡುವುದು ಸರಿಯೋ ಹೇಗೆ? ಪ್ರಜಾ ತಂತ್ರ ವ್ಯವಸ್ಥೆಯಲ್ಲಿ ಈ ರೀತಿ statement ಕೊಡುವುದು ಸರಿಯೇ? ಮಾನ್ಯ ಅಧ್ಯಕ್ಷರೆ, ನಾವು ಇದರಲ್ಲಿ ಯಾವುದೇ ರೀತಿ ರಾಜಕೀಯ ಮಾಡುವ ಪ್ರಶ್ನೆ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಸದನಕ್ಕೆ ತಪ್ಪು ಮಾಹಿತಿ ಕೊಡುತ್ತಿದ್ದಾರೆ, ಸಾರ್ವಜನಿಕರಿಗೆ ತಪ್ಪು ಮಾಹಿತಿ ಕೊಡುತ್ತಿದ್ದಾರೆ. ಇದನ್ನು ನಾವು ಪ್ರತಿಭಟನೆ ಮಾಡುತ್ತೇವೆ. ಇದನ್ನು protest ಮಾಡುತ್ತೇವೆ. ಮಾನ್ಯ ಮುಖ್ಯ ಮಂತ್ರಿಗಳು ಮೊಂಡುತನ ತೋರಿಸುತ್ತಿದ್ದಾರೆ, ಇದು ಸರಿಯಲ್ಲ. ಮಾನ್ಯ ಮುಖ್ಯ ಮಂತ್ರಿಗಳ ಮೊಂಡುತನದಿಂದ ಸದನ ಒಂದು ವಾರ ಮುಂದೆ ಹೋಯಿತು. ಅದೇ ರೀತಿ ಇವತ್ತು ವಿರೋಧ ಪಕ್ಷಗಳ ಮೇಲೆ ಸುಳ್ಳು ಆರೋಪಗಳನ್ನು ಮಾಡುವುದರ ಮುಖಾಂತರ, ಜನರ ಹೋರಾಟಕ್ಕೆ ಸ್ಪಂದನೆ ಮಾಡಿದ್ದೇವೆ ಎಂದು ಹೇಳದೇ, ಈ ರೀತಿ ಹೇಳುತ್ತಿದ್ದಾರೆ. ದಯವಿಟ್ಟು ಪಾರ್ಲಿಮೆಂಟರಿ ವ್ಯವಸ್ಥೆಯಲ್ಲಿ ಈ ರೀತಿ statement ಕೊಡುವುದು ಒಳ್ಳೆಯದಲ್ಲ. ನಾನು ಇದನ್ನು ವಿರೋಧ ಮಾಡುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು:– ನಿಮ್ಮ ಅಭಿಪ್ರಾಯವನ್ನು ದಾಖಲು ಮಾಡಿಕೊಂಡಿದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು CBI ತನಿಖೆಗೆ ಕೊಟ್ಟಿರುವುದನ್ನು ನಾವು ಸ್ವಾಗತ ಮಾಡಿದ್ದೇವೆ, ಒಪ್ಪಿಕೊಂಡಿದ್ದೇವೆ. ಆದರೆ ವಿನಾ ಕಾರಣ ಇವತ್ತು ರಾಜಕೀಯ ಮಾಡುತ್ತಿದ್ದಾರೆ. ರಾಜಕೀಯ ಪ್ರೇರಿತ statement ಕೊಟ್ಟಿದ್ದಾರೆ. ಇದನ್ನು ವಿರೋಧ ಮಾಡುತ್ತೇವೆ, ಇದನ್ನು ಪ್ರತಿಭಟಿಸುತ್ತೇವೆ, ನಾವು ಜನರ ಪರವಾಗಿ ಹೋರಾಟ ಮಾಡಿದ್ದೇವೆ. ಇದರಲ್ಲಿ ನಾವು ಯಾವುದೇ ರೀತಿಯ ರಾಜಕಾರಣ ಮಾಡಿಲ್ಲ. ಮಾನ್ಯ ಮುಖ್ಯ ಮಂತ್ರಿಗಳ ಹೇಳಿಕೆ ಸುಳ್ಳು. ನಾವು ಇದನ್ನು protest ಮಾಡಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ BJP ಶಾಸಕರು ಸಭಾತ್ಯಾಗ ಮಾಡಿದರು)

ಶ್ರೀ ವೈ.ಎಸ್.ವಿ. ದತ್ತ:– ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು:– No discussion. ಪ್ರಶ್ನೋತ್ತರ ಪ್ರಾರಂಭವಾಗಿದೆ, ಪ್ರಶ್ನೆಗೆ ಬಂದಿದ್ದೇವೆ. ಈಗ ನಾನು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ವೈ.ಎಸ್.ವಿ. ದತ್ತ:– ಮಾನ್ಯ ಅಧ್ಯಕ್ಷರೆ, ನಮ್ಮ ಅಭಿಪ್ರಾಯವನ್ನೂ ಹೇಳುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು:– ಇಲ್ಲ ಇಲ್ಲ. ಈಗ ಯಾವುದೂ ಇಲ್ಲ. ಅಪ್ಪಾಜಿಯವರು ಹೇಳಿ.

ಶ್ರೀ ವೈ.ಎಸ್.ವಿ. ದತ್ತ:– ವಿರೋಧ ಪಕ್ಷದವರು ಮಾತ್ರ ರಾಜಕೀಯ ಮಾಡಿದ್ದಾರೆ . . . .

(ಗೊಂದಲ)

ಅಧ್ಯಕ್ಷರು:– ಏನು ಹೆದರಿಸುತ್ತೀರಾ ಪ್ರಶ್ನೋತ್ತರಕ್ಕೆ ಮುಂದೆ ನಾವು ಒಂದು ಬಿಟ್ಟಿದ್ದೇವೆ, ನಾವು ಹಿಂದಕ್ಕೆ ಹೋಗುವುದಕ್ಕಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು:– ಯಾವುದನ್ನೂ ದಾಖಲೆ ಮಾಡಿಕೊಳ್ಳಬೇಡಿ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತ:– ಜನರ ಭಾವನೆಗಳಿಗೆ ನಾವು ಧ್ವನಿಯಾಗಿದ್ದೆವು. ಅದು ಪ್ರತಿಪಕ್ಷದ ಕರ್ತವ್ಯವಾಗಿದೆ. ನಮ್ಮಲ್ಲಿ ಏನು ರಾಜಕಾರಣ ಇದೆ? ಈ ಹೇಳಿಕೆಯನ್ನು ಧಿಕ್ಕರಿಸಿ ನಾವೂ ಕೂಡ ಸಭಾತ್ಯಾಗ ಮಾಡುತ್ತೇವೆ. ಜನರ ಭಾವನೆಗಳಿಗೆ ಧ್ವನಿಯಾಗುವುದು ನಮ್ಮ ಕರ್ತವ್ಯ ಪ್ರತಿಪಕ್ಷ ಎಂದರೆ ರಾಜಕಾರಣ ಮಾಡುತ್ತಿದ್ದೇವೆಯೇ?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ನಿಮಗೆ CBI ಗೆ ರೆಫರ್ ಮಾಡುವುದು ಬೇಕಾಗಿರಲಿಲ್ಲ. ನಿಮಗೆ ರಾಜಕೀಯ ಬೇಕಾಗಿದೆ.

(ಗೊಂದಲ)

(ಈ ಹಂತದಲ್ಲಿ ಜೆ.ಡಿ.(ಎಸ್) ಪಕ್ಷದ ಶಾಸಕರು ಸಭಾತ್ಯಾಗ ಮಾಡಿದರು)

ಉಪ – ವಿಭಾಗಾಧಿಕಾರಿಗಳ ಕಛೇರಿ

212(4418); ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ)

ಅ) ರಾಜ್ಯದಲ್ಲಿರುವ ಉಪ–ವಿಭಾಗಾಧಿಕಾರಿಗಳ ಕಛೇರಿಗಳ (ಎ.ಸಿ. ಆಫೀಸ್) ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು);

ಆ) ರಾಜ್ಯದಲ್ಲಿ ಉಪ–ವಿಭಾಗಾಧಿಕಾರಿಗಳ ಕಛೇರಿಗಳನ್ನು ಹೊಸದಾಗಿ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ, ಯಾವ ಯಾವ ಜಿಲ್ಲೆಗಳಲ್ಲಿ ಉಪ–ವಿಭಾಗಾಧಿಕಾರಿಗಳ ಕಛೇರಿಗಳನ್ನು ತೆರೆಯಲಾಗುವುದು (ವಿವರ ನೀಡುವುದು);

ಈ) ವಿಜಯಪುರ ಜಿಲ್ಲೆಯ ಮುದ್ದೇಬಿಹಾಳದಲ್ಲಿ ಉಪ–ವಿಭಾಗಾಧಿಕಾರಿಗಳ ಕಛೇರಿ ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿದೆಯೇ (ಸಂಪೂರ್ಣ ವಿವರ ನೀಡುವುದು)?